# ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಥನ ಕವನ : ಒಂದು ಅವಲೋಕನ

• ಡಾ. ಆರ್. ವಿ. ಪಾಟೀಲ

'ಕಥನ ಕವನ' ಪದಗುಚ್ಛದಲ್ಲಿಯೇ 'ಕಥನ' ಮತ್ತು ಕವನ ಎಂಬ ಎರಡು ಅಂಶಗಳಿವೆ. 'ಕಥನ' ಎಂಬುದು 'ಕಥನ ವಿಧಾನ' ಮತ್ತು 'ಕಥೆ' ಈ ಎರಡನ್ನೂ ಸೂಚಿಸುತ್ತದೆ. 'ಕವನ' ಎಂಬುದು ಕಾವ್ಯಾತ್ಮಕತೆಯನ್ನೂ, ಪದ್ಯ ರೂಪವನ್ನೂ ಸೂಚಿಸುತ್ತದೆ. ಅಂದರೆ ಕಥನ ಕವನವು ಈ ನಾಲ್ಕು ಅಂಶಗಳನ್ನೂ–ಕಥನ (Narrative Mode), ಕಥೆ (Story), ಕಾವ್ಯಾತ್ಮಕತೆ (Poetic quality), ಪದ್ಯ ರೂಪ (Verse form), ಹೊಂದಿರುತ್ತದೆ ಎಂದಾಯಿತು. ಈ ನಾಲ್ಕು ಅಂಶಗಳಲ್ಲಿ **'ಕಥನ ಧಾಟಿ'** ಮತ್ತು **'ಪದ್ಯ ರೂಪ'** ಕಥನಕವನದ ಅನಿವಾರ್ಯ ಅಂಶಗಳಾಗಿವೆ. ಕಥನ ಕವನ ಮೂಲಭೂತವಾಗಿ ಒಂದು ಪದ್ಯ ರೂಪದ ರಚನೆಯಾಗಿದೆ. ಈ ಪದ್ಯರೂಪದ ರಚನೆಯಲ್ಲಿ ಕವಿಯು ತನ್ನ ಭಾವನೆ, ಕಲ್ಪನೆ, ಅನುಭವ, ವಿಚಾರಗಳನ್ನು ಆತ್ಮನಿಷ್ಠ ನೆಲೆಯಲ್ಲಿ ನಿರೂಪಿಸದೆ. ಬೇರೆ ಪಾತ್ರ ಮತ್ತು ಘಟನೆಗಳ ಮೂಲಕ ನಿರೂಪಿಸುತ್ತಾನೆ. ಆದ್ದರಿಂದಲೇ ಕಥನ ಕವನ ವಸ್ತುನಿಷ್ಠ ಕಾವ್ಯವಾಗಿದೆ. (Objective Poetry) ಸರ್ವಸಾಕ್ಷಿತ್ವ ನಿರೂಪಣೆಯಲ್ಲಿ ಕಥನಕವನಗಳು ವಿಶೇಷವಾಗಿ ರಚಿತವಾಗಿವೆ ಎಂಬುದನ್ನು ಇಲ್ಲಿ ನೆನೆಯಬಹುದು. ಒಂದು ವೇಳೆ ಕಥನಕವನದಲ್ಲಿ ಆತ್ಮನಿಷ್ಠ ನಿರೂಪಣೆ ಕಂಡು ಬಂದರೂ ಅದು ಪಾತ್ರವೊಂದರ ಅನುಭವದ ಅಭಿವ್ಯಕ್ತಿಯಾಗಿರುತ್ತದೆ. ಅಂದರೆ ವಸ್ತುನಿಷ್ಠತೆ ಎಂಬುದು ಕಥನಕವನದ ಇನ್ನೊಂದು ಪ್ರಮುಖ ಲಕ್ಷಣವೆಂದಾಯಿತು. ಕಥನ ಕವನದ ಮೂರನೆಯ ಅನಿವಾರ್ಯ ಲಕ್ಷಣ ಅದರ ಧಾಟಿ ಎಲ್ಲ ಕಥನಕವನಗಳೂ ಕಥನ ಧಾಟಿಯಲ್ಲಿ (Narrative Mode) ಇರಲೇಬೇಕಾಗುತ್ತದೆ. ಇನ್ನು ಕಥೆಯ ಅಂಶ ಕಥನ ಕವನದಲ್ಲಿ ಯಾವ ಪ್ರಮಾಣದಲ್ಲಿ ಇರುತ್ತದೆ ಎಂಬುದನ್ನು ಹೇಳುವುದು ಕಷ್ಟ. ಕಥನ ಕವನದಲ್ಲಿ ಹೇಳಬಹುದಾದ ಒಂದು ದೃಢವಾದ ಕಥೆ ಇರಬಹುದು. ಅಥವಾ ಕಥೆಯ ಅಂಶ ತೀರ ತೆಳುವಾಗಿರಬಹುದು. ಆದರೆ ಈ ಎರಡೂ ಬಗೆಯ ರಚನೆಗಳನ್ನು ಕಥನ ಕವನವೆಂದೇ ವ್ಯವಹರಿಸುತ್ತಾ ಬರಲಾಗಿದೆ.

ಕಥನ ಕವನದ ಈ ನಾಲ್ಕು ಬಿಡಿ ಅಂಶಗಳನ್ನು ಸ್ಥೂಲವಾಗಿ ವಿವೇಚಿಸಿ, ಆ ಬಳಿಕ ಸೂತ್ರ ರೂಪವಾಗಿ ಕಥನ ಕವನವನ್ನು ಒಂದು ವ್ಯಾಖ್ಯೆಯಲ್ಲಿ ನಿರೂಪಿಸುವ ಯತ್ನ ಮಾಡಬಹುದು.

೧. **ಕಥನ** : ಒಂದು ಅಥವಾ ಅನೇಕ ಘಟನೆಗಳನ್ನು ಕಾಲಾನುಕ್ರಮದಲ್ಲಿ ಮಂಡಿಸಿದಾಗ ಅಭಿವ್ಯಕ್ತಿಗೆ ಕಥನದ ಧಾಟಿ ಪ್ರಾಪ್ತವಾಗುತ್ತದೆ. ಅಂದರೆ ಕಥನದಲ್ಲಿ ಘಟನೆಗಳ ಸರಣಿ ಮತ್ತು ಕಾಲಾನುಕ್ರಮಣಿಕೆ ಮುಖ್ಯವಾಗುತ್ತದೆ.

೨. **ಕಥೆ** : ಕಥನ ಎಂಬುದು ಕಥೆಂತು ಚಲನಶೀಲತೆಯನ್ನು ಸೂಚಿಸುತ್ತದೆ. ನಿರ್ದಿಷ್ಟವಾದ ಸ್ಥಳ, ಕಾಲ, ಪಾತ್ರಗಳು, ಅವುಗಳ ಸಂಬಂಧ, ಇವುಗಳನ್ನು ಕಥನದಲ್ಲಿ ಅಳವಡಿಸಿದಾಗ ಕಥೆಯೊಂದು ಸೃಷ್ಟಿಯಾಗತೊಡಗುತ್ತದೆ. ನಿರ್ದಿಷ್ಟತೆಯೇ ಕಥೆಯ ಮುಖ್ಯ ಲಕ್ಷಣವಾಗಿದೆ. ಇಂಥ ಪಾತ್ರ ಎಂದು ಬೊಟ್ಟಿಟ್ಟು ತೋರಿಸಿ, ಪ್ರತಿಜಗತ್ತೊಂದನ್ನು ಸೃಷ್ಟಿಸಿದಾಗ ಅದು ಕಥೆಯಾಗುತ್ತದೆ. ಕಥೆಯಲ್ಲಿ ಅಂತರಂಗದ ಅಭಿವ್ಯಕ್ತಿ ಬರಹವಾದರೂ, ಬಹಿರಂಗದ ಪ್ರಪಂಚದಲ್ಲೇ ಅದರ ಪ್ರಧಾನ ಆಸಕ್ತಿ.

೩. **ಪದ್ಯ ರೂಪ** : ಪದ್ಯ ರೂಪ, ಕಥನ ಕವನದ ಬಹಿರಂಗದ ಸ್ವರೂಪವನ್ನು ಸೂಚಿಸುತ್ತದೆ. ಪದ್ಯರೂಪದಲ್ಲಿ ಏನನ್ನೂ ಹೇಳಬಹುದು. ಹಿಂದೆ ನಮ್ಮಲ್ಲಿ ಶಾಸ್ತ್ರ, ವ್ಯಾಕರಣ